ಪ್ರಜಾವಾಣಿ

## ಎಡಿಎಂ ಕಂಪನಿ, ದೇಶಪಾಂಡೆ ಫೌಂಡೇಷನ್ ಸಹಯೋಗದಲ್ಲಿ ಹಸ್ತಾಂತರ

# ಕಿಮ್ಸ್‌ಗೆ ₹38 ಲಕ್ಷದ ವೈದ್ಯಕೀಯ ಸಲಕರಣೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಎಡಿಎಂ ಆಗ್ರೊ ಇಂಡಸ್ಟ್ರೀಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು ದೇಶಪಾಂಡೆ ಫೌಂಡೇಷನ್ ಸಹಯೋಗದಲ್ಲಿ, ಕಿಮ್ಸ್ ಆಸ್ಪತ್ರೆಗೆ ₹38 ಲಕ್ಷ ಮೌಲ್ಯದ ವೈದ್ಯಕೀಯ ಸಲಕರಣೆಗಳನ್ನು ಶುಕ್ರವಾರ ನೀಡಲಾಯಿತು. ಇದರಲ್ಲಿ ಒಂದು ಅರಿವಳಿಕೆ ಯಂತ್ರ, ನವಜಾತು ಶಿಶುಗಳ ಆರೋಗ್ಯ ನಿಯಂತ್ರಿಸುವ (ನಿಯೋ ನಟಾಲ್ ವಾರ್ಮರ್ಸ್) ಯಂತ್ರ ಹಾಗೂ 10 ಪ್ರೋಬ್ಸ್‌ಗಳಿವೆ.

ಮುಖ್ಯ ಅತಿಥಿಯಾಗಿ ಪಾಲಿಕೆ ಆಯುಕ್ತ ಡಾ.ಬಿ. ಗೋಪಾಲಕೃಷ್ಣ ಅವರು, ಕಿಮ್ಸ್‌ಗೆ ವರ್ಚುವಲ್ ಆಗಿ ಉಪಕರಣಗಳನ್ನು ಹಸ್ತಾಂತರಿಸಿದರು.

ಬಳಿಕ ಮಾತನಾಡಿದ ಅವರು, ‘ಎಡಿಎಂ ಮತ್ತು ದೇಶಪಾಂಡೆ ಫೌಂಡೇಷನ್‌ನವರು ನೀಡಿರುವ ವೈದ್ಯಕೀಯ ಉಪಕರಣಗಳು ಗರ್ಭಿಣಿಯರು

### ಮುಖ್ಯಾಂಶಗಳು

- ಅರಿವಳಿಕೆ ಯಂತ್ರ, ನಿಯೋ ನಟಾಲ್ ವಾರ್ಮರ್ಸ್, ಪ್ರೋಬ್ಸ್ ಕೊಡುಗೆ
- ಗರ್ಭಿಣಿಯರು, ನವಜಾತ ಶಿಶುಗಳ ಚಿಕಿತ್ಸೆಗೆ ಉಪಕರಣಗಳು ಸಹಕಾರಿ

ಮತ್ತು ನವಜಾತ ಶಿಶುಗಳ ಚಿಕಿತ್ಸೆಗೆ ಅತ್ಯಂತ ಉಪಯುಕ್ತವಾಗಿವೆ. ದುಬಾರಿ ಸಲಕರಣೆಗಳನ್ನು ಕಿಮ್ಸ್‌ಗೆ ಕೊಡುಗೆಯಾಗಿ ನೀಡಿರುವುದರಿಂದ, ಬಡ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಲು ಸಾಧ್ಯವಾಗಲಿದೆ’ ಎಂದರು.

‘ಕೋವಿಡ್ ಮೊದಲ ಮತ್ತು ಎರಡನೇ ಅಲೆಗಳ ಸಂದರ್ಭದಲ್ಲೂ ಹಲವು ಕಂಪನಿಗಳು ಹಾಗೂ ಸಂಘ–ಸಂಸ್ಥೆಗಳು ಕಿಮ್ಸ್‌ಗೆ ನೆರವು ನೀಡಿವೆ. ಮಾಸ್ಕ್, ಸ್ಯಾನಿಟೈಸರ್, ವೈದ್ಯಕೀಯ ಆಮ್ಲಜನಕದ ಕಾನ್ಸಂಟ್ರೇಟರ್‌ಗಳನ್ನು ನೀಡಿದ್ದರಿಂದ ಕೋವಿಡ್ ಪರಿಸ್ಥಿತಿಯನ್ನು ಉತ್ತಮವಾಗಿ ನಿಭಾಯಿಸಲು ಸಾಧ್ಯವಾಯಿತು. ಅದೇ ರೀತಿ, ಮೂರನೇ ಅಲೆಯಲ್ಲೂ ನೆರವು ನೀಡುತ್ತಿರುವುದು ಶ್ಲಾಘನೀಯ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಎಡಿಎಂ ಆಗ್ರೊ ಇಂಡಸ್ಟ್ರೀಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು ದೇಶಪಾಂಡೆ ಫೌಂಡೇಷನ್‌ನಿಂದ ₹38 ಲಕ್ಷ ಮೌಲ್ಯದ ವೈದ್ಯಕೀಯ ಸಲಕರಣೆಗಳನ್ನು ಮಹಾನಗರ ಪಾಲಿಕೆ ಆಯುಕ್ತ ಡಾ.ಬಿ. ಗೋಪಾಲಕೃಷ್ಣ ಅವರು ಕಿಮ್ಸ್‌ಗೆ ವರ್ಚುವಲ್ ಆಗಿ ಶುಕ್ರವಾರ ಹಸ್ತಾಂತರಿಸಿದರು. ಕಿಮ್ಸ್ ಆಡಳಿತಾಧಿಕಾರಿ ರಾಜಶ್ರೀ ಜೈನಾಪುರ, ಫೌಂಡೇಷನ್ ಸಿಇಒ ವಿವೇಕ ಪವಾರ ಹಾಗೂ ಎಡಿಎಂ ಕಂಪನಿಯ ತಾಂತ್ರಿಕ ವಿಭಾಗದ ಮುಖ್ಯಸ್ಥ ಹೇಮಂತಕುಮಾರ್ ಸಾರಸ್ವತ ಇದ್ದಾರೆ

ಕಿಮ್ಸ್ ವೈದ್ಯಕೀಯ ಅಧೀಕ್ಷಕ ಡಾ. ಅರುಣಕುಮಾರ ಮಾತನಾಡಿ, ‘ಕಿಮ್ಸ್ ಉತ್ತರ ಕರ್ನಾಟಕ ಭಾಗದ ಆರೋಗ್ಯ ಸಂಜೀವಿನಿಯಾಗಿದೆ. ಕೋವಿಡ್ ಮೂರನೇ ಅಲೆಯ ಸಂಕಷ್ಟದ ಕಾಲದಲ್ಲಿ ಆಸ್ಪತ್ರೆಗೆ ಅತ್ಯಾಧುನಿಕ ತಂತ್ರಜ್ಞಾನದ ವೈದ್ಯಕೀಯ ಸಲಕರಣೆಗಳನ್ನು ನೀಡಲಾಗಿದೆ. ಇವು ಆಸ್ಪತ್ರೆಯ ಚಿಕಿತ್ಸಾ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಿವೆ’ ಎಂದು ಹೇಳಿದರು.

ಕಿಮ್ಸ್‌ನ ಡಾ. ಎಸ್.ವೈ. ಮುಲ್ಕಿ ಪಾಟೀಲ, ಪ್ರೊ. ನಾರಾಯಣ ಹೆಬಸೂರ, ಎಡಿಎಂ ಕಂಪನಿಯ ವಾಣಿಜ್ಯ ಉಪ ಮುಖ್ಯಸ್ಥ ಶಶಾಂಕ ರೆಡ್ಡಿ, ವ್ಯವಸ್ಥಾಪಕ ಅನಿಲಕುಮಾರ ತೆರದಾಳ, ದೇಶಪಾಂಡೆ ಫೌಂಡೇಷನ್‌ನ ಸಿಒಒ ಸುನೀಲ ಕೇಸಿ ಹಾಗೂ ಹಿರಿಯ ನಿರ್ದೇಶಕ ವಿಜಯ ಪುರೋಹಿತ ಇದ್ದರು.